ಶ್ರೀ ಬಾಬುರಾವ್ ಚವಾಣ್ : ಅಧ್ಯಕ್ಷರೇ, ಸುಮಾರು ಒಂದು ವಾರದಿಂದ ನಮ್ಮ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಬರುತ್ತಿಲ್ಲ.

ಛೇರ್ಮನ್ : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ.

1785. ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಲೋಪದೋಷಗಳು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ಕಿಬ್ಬನಹಳ್ಳಿಯಲ್ಲಿ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಮತ್ತು ಅಂತರಸನಹಳ್ಳಿ ರಿಸೀವಿಂಗ್ ಸ್ಟೇಷನ್ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಯೇನು?

ಇ) ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕು ವಿದ್ಯುತ್ ಸ್ಟೇಷನ್‌ದಲ್ಲಿ ಬರುತ್ತಿರುವ ಹಾಗೂ ಅಲ್ಲಿಂದ ಬಿಡುಗಡೆಯಾಗುತ್ತಿರುವ ವಿದ್ಯುತ್ ಸ್ವಾಮ್ಯ ವೋಲ್ಟೇಜ್ ಎಷ್ಟು?

ಈ) ನೀರಾವರಿ ಪಂಪುಸೆಟ್ಟುಗಳಿಗೆ ಬೇಕಾಗುವ ವಿದ್ಯುತ್ ಪ್ರಮಾಣವೆಷ್ಟು ; ಹಾಗೂ ಈಗ ಸರಬರಾಜಾಗುತ್ತಿರುವ ಪ್ರಮಾಣವೆಷ್ಟು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು.

ಆ) ಕಿಬ್ಬನಹಳ್ಳಿಯಲ್ಲಿನ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಮತ್ತು ಅಂತರಸನಹಳ್ಳಿಯಲ್ಲಿನ 220 ಕೆ.ವಿ. ರಿಸೀವಿಂಗ್ ಸ್ಟೇಷನ್ ಕೆಲಸಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಈಗಾಗಲೇ ಕೈಕೊಂಡಿದೆ.

ಇ) ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ 110 ಕೆ.ವಿ.

ಹೊರ ಹೋಗುತ್ತಿರುವ ವಿದ್ಯುತ್ ವೋಲ್ಟೇಜ್ 11 ಕೆ.ವಿ.

ಈ) ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಗೆ ಯಾವ ಮಿತಿಯನ್ನು ವಿಧಿಸಿಲ್ಲ ಅಲ್ಲದೇ 10 ಹೆಚ್.ಪಿ. ವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಮಾಪಕಗಳನ್ನು ಅಳವಡಿಸುತ್ತಿಲ್ಲ. ಆದುದರಿಂದ ಬೇಕಾಗುವ ವಿದ್ಯುತ್ ಪ್ರಮಾಣ, ಹಾಲಿ ರಾಜ್ಯದ ಒಟ್ಟು ವಿದ್ಯುತ್ ಪ್ರಮಾಣದ ಶೇಕಡ 37 ರಷ್ಟಿದೆಯೆಂದು ಅಂದಾಜು ಮಾಡಿದೆ.